DFA 98840

File No. TD/137/TDQ/2022-DO-Trans (Computer No. 954574)

# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 644

ಸದಸ್ಯರ ಹೆಸರು : ಶ್ರೀ ಡಿ.ಎಸ್. ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಉತ್ತರಿಸಬೇಕಾದ ಸಚಿವರು : ಮಾನ್ಯ ಸಾರಿಗೆ ಹಾಗೂ ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರು

ಉತ್ತರಿಸಬೇಕಾದ ದಿನಾಂಕ : 23-12-2022

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ಸಾರಿಗೆ ಇಲಾಖೆಯಲ್ಲಿ ಕಲಿಕಾ ಪರವಾನಗಿಯಿಂದ ಹಿಡಿದು ವಾಹನ ನೋಂದಣಿವರೆಗೆ ಎಲ್ಲವನ್ನು ಆನ್ ಲೈನ್ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; | ಸಾರಿಗೆ ಇಲಾಖೆಯ ಚಾಲನಾ ಅನುಜ್ಞಾ ಪತ್ರ ಮತ್ತು ನೋಂದಣಿ ಪ್ರಮಾಣಪತ್ರ ಸಂಬಂಧಿತ ಸೇವೆಗಳನ್ನು ಎನ್.ಐ.ಸಿ.ರವರ ಮೂಲಕ ಅಭಿವೃದ್ಧಿಪಡಿಸಿರುವ ಕೇಂದ್ರೀಕೃತ ವೆಬ್ ಆಧಾರಿತ ಸಾರಥಿ-4 ಮತ್ತು ವಾಹನ್-4 ತಂತ್ರಾಂಶದಲ್ಲಿ ಆನ್‌ಲೈನ್ ಮೂಲಕ ಸಾರ್ವಜನಿಕರಿಗೆ ಸೇವೆಗಳನ್ನು ವಿತರಿಸಲಾಗುತ್ತಿದೆ. |
| ಆ | ಆನ್‌ಲೈನ್ ಆದ ತರುವಾಯ ಜನಸಾಮಾನ್ಯರು ಸೇರಿದಂತೆ ಇಲಾಖಾಧಿಕಾರಿಗಳು ಸಹ ಈ ವ್ಯವಸ್ಥೆಗೆ ಹೊಂದಿಕೊಳ್ಳಲು ತುಂಬಾ ಕಷ್ಟಪಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; | ಸಾರಿಗೆ ಇಲಾಖೆಯ ಸೇವೆಗಳನ್ನು ಕೇಂದ್ರೀಕೃತ ವೆಬ್ ಆಧಾರಿತ ಪರಿವಾಹನ್ ವೆಬ್ ಸೈಟಿನಲ್ಲಿ ಸಾರಥಿ ಮತ್ತು ವಾಹನ್ ತಂತ್ರಾಂಶದ ಮೂಲಕ ಸಾರ್ವಜನಿಕರಿಗೆ 31 ಸೇವೆಗಳನ್ನು ಸಂಪರ್ಕರಹಿತವಾಗಿ ಪ್ರಾದೇಶಿಕ ಸಾರಿಗೆ ಕಛೇರಿಗಳಿಗೆ ಭೇಟಿ ನೀಡದೆಯೇ ವಿತರಿಸಲಾಗುತ್ತಿರುವುದರಿಂದ ಜನಸಾಮಾನ್ಯರಿಗೆ ಹೆಚ್ಚಿನ ಅನುಕೂಲವಾಗುತ್ತಿದ್ದು ಮತ್ತು ರಾಜ್ಯದ ಪ್ರತಿಯೊಂದು ಪ್ರಾದೇಶಿಕ ಸಾರಿಗೆ ಕಛೇರಿಗಳಿಗೂ ತಾಂತ್ರಿಕ ಸಹಾಯಕರನ್ನು ಒದಗಿಸಲಾಗಿರುವುದರಿಂದ ಇಲಾಖಾಧಿಕಾರಿಗಳಿಗೆ ಯಾವುದೇ ಕಷ್ಟವಾಗುತ್ತಿರುವುದಿಲ್ಲ. |
| ಇ | ಪದೇ ಪದೇ ಸರ್ವರ್ ಸಮಸ್ಯೆಗಳಿಂದ ಹೆಚ್ಚಿನ ಸಮಯ ವ್ಯಯವಾಗುತ್ತಿ-ರುವುದನ್ನು ತಪ್ಪಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ? | ಎನ್.ಐ.ಸಿ. ರವರ ಮೂಲಕ ಅಭಿವೃದ್ಧಿ ಪಡಿಸಿರುವ ಕೇಂದ್ರೀಕೃತ ವೆಬ್ ಆಧಾರಿತ ಸಾರಥಿ-4 ಮತ್ತು ವಾಹನ್-4 ತಂತ್ರಾಂಶದ ಸರ್ವರನ್ನು ಎನ್.ಐ.ಸಿ. ನವದೆಹಲಿ ಇಲ್ಲಿ ನಿರ್ವಹಿಸಲ್ಪಡುತ್ತಿದ್ದು, ಸರ್ವರ್ ನಲ್ಲಿ ಪದೇ ಪದೇ ಕಂಡುಬರುತ್ತಿರುವ ಸರ್ವರ್ ಸಮಸ್ಯೆಗಳನ್ನು ನವದೆಹಲಿಯಲ್ಲಿರುವ ಎನ್.ಐ.ಸಿ.ಯ ಉನ್ನತ ತಂಡದವರಿಂದ ಕಾಲಕಾಲಕ್ಕೆ ಪರಿಹರಿಸಲಾಗುತ್ತಿದೆ. |

ಟಿಡಿ 137 ಟಿಡಿಕ್ಯೂ 2022

(ಬಿ. ಶ್ರೀರಾಮುಲು)
ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರು.



Generated from eOffice by B SREERAMULU, TD-MIN(BS), TRANSPORT MINISTER, Trans on 14/12/2022 04:21 PM